ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 65/2013

(ಫ್ರಾಸಾ-4 ಚಾಸಾ-3 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 02.02.2023

| | | |
|---|---|---|
| ಸಾಕ್ಷಿದಾರರ ಹೆಸರು | - | ಚಂದ್ರ |
| ತಂದೆಯ ಹೆಸರು | - | ಚೂಡಪ್ಪ |
| ವಯಸ್ಸು | - | 45 ವರ್ಷ, |
| ಉದ್ಯೋಗ | - | ಸೆಂಟ್ರಿಂಗ್ ಕೆಲಸ |
| ವಾಸ | - | ಕೋಣನಕುಂಟೆ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ದೀಪಕ್ ಈತನ ಪರಿಚಯ ಇಲ್ಲ. ಈಗ ಹೆಸರು ಓದಿ ಹೇಳಿದ ಆರೋಪಿತರ ಪರಿಚಯ ಇಲ್ಲ. ಆರೋಪಿತರು ಚಾಸಾ-1 ಈತನಿಗೆ ಹೊಡೆಯುವುದನ್ನಾಗಲೀ ಬಯ್ಯುವುದನ್ನಾಗಲೀ ನಾನು ನೋಡಿಲ್ಲ. ನನಗೆ ಈ ಪ್ರಕರಣದ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಹೇಳಿಕೆನೀಡಿಲ್ಲ. ಈಗ ತೋರಿಸಿದ ಮು.ಮಾ-1 ನ್ನು ನಾನು ನೋಡಿಲ್ಲ. ಈಗ ತೋರಿಸಿದ ನಿಪಿ-1 ರ ಮೇಲೆ ನನ್ನ ಸಹಿ ಇದೆ. ಸಾಕ್ಷಿದಾರರ ಸಹಿಯನ್ನು ನಿಪಿ-1(ಬಿ) ಎಂದು ಗುರ್ತಿಸಲಾಯಿತು. ನಿಪಿ-1 ಕ್ಕೆ ತಲಘಟ್ಟಪುರದಲ್ಲಿ ಸಹಿ ಮಾಡಿದ್ದೇನೆ. ಅದರಲ್ಲಿ ಬರೆದ ಮಾಹಿತಿ ನನಗೆ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2. ಚಾಸಾ-1 ಈತ ಆಶಾಳನ್ನು ಪ್ರೀತಿಸಿ ಮದುವೆಯಾಗಿದ್ದ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ನನ್ನ ಸ್ನೇಹಿತ ಎಂದರೆ ಸರಿಯಲ್ಲ. ದಿಃ02.09.2012 ರಂದು ಸಂಜೆ 5 ಘಂಟೆ ಸಮಯದಲ್ಲಿ ನಾನು, ಚಾಸಾ-1 ಮತ್ತು ಫ್ರಾಸಾ-3 ತಲಘಟ್ಟಪುರದ ಎಂ ಎಸ್ ವೈನ್ಸ್ ಸ್ಟೋರ್ ಮುಂದೆ ಮಾತನಾಡುತ್ತಾ ನಿಂತಿದ್ದಾಗ ಈ ಪ್ರಕರಣ ಆರೋಪಿತರು ಕೆಎ-01-ಎ-432 ಟಾಟಾ ಸುಮೋದಲ್ಲಿ ಅಲ್ಲಿಗೆ ಬಂದರು ಎಂದರೆ ಗೊತ್ತಿಲ್ಲ. ಚಾಸಾ-1 ಈತನಿಗೆ

ಮಾದಿಗ ನನ್ನ ಮಗನೇ ಎಂದು ಅವರು ಬೈದರು ಹಾಗೂ ಇವನನ್ನು ಬಿಡಬೇಡಿ, ಸಾಯಿಸಿಬಿಡೋಣ ಎಂದು ಹೇಳಿದರು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಅನೀಲ ದೊಣ್ಣೆಯಿಂದ ಚಾಸಾ-1 ಈತನ ತಲೆಗೆ ಹೊಡೆದ ಎಂದರೆ ನಾನು ನೋಡಿಲ್ಲ. 3 ನೇ ಆರೋಪಿ ಗೋಪಿ ಬಿಯರ್ ಬಾಟಲ್ ನಿಂದ ಚಾಸಾ-1 ಈತನ ಕುತ್ತಿಗೆಯ ಹತ್ತಿರ ಹೊಡೆದ ಎಂದರೆ ನಾನು ನೋಡಿಲ್ಲ. 2 ನೇ ಆರೋಪಿ ಸಂಪಣ್ಣಿ ಕೈಯಿಂದ ಚಾಸಾ-1 ಈತನ ಕಣ್ಣಿನ ಮೇಲೆ ಗುದ್ದಿದ ಎಂದರೆ ನಾನು ನೋಡಿಲ್ಲ. 4 ನೇ ಆರೋಪಿ ಕೈಯಿಂದ ಚಾಸಾ-1 ಈತನಿಗೆ ಹೊಡೆಯುತ್ತಿದ್ದ ಎಂದರೆ ನಾನು ನೋಡಿಲ್ಲ. ಎಲ್ಲಾ ಆರೋಪಿತರು ಚಾಸಾ-1 ಈತನಿಗೆ ನೀನು ನಮ್ಮ ಜಾತಿ ಕೆಡಿಸಿದ್ದೀಯಾ, ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಗೊತ್ತಿಲ್ಲ. ಆರೋಪಿತರು ದೊಣ್ಣೆಯನ್ನು ತೆಗೆದುಕೊಂಡು ಟಾಟಾ ಸುಮೋದಲ್ಲಿ ಹೋದರು ಎಂದರೆ ನಾನು ನೋಡಿಲ್ಲ. ಈಗ ಓದಿ ಹೇಳಿದಂತೆ ನಿಪಿ-3 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಂತರ ದಿಃ03.09.2012 ರಂದು ಪೋಲಿಸರು ಘಟನಾ ಸ್ಥಳದ ಮಹಜರ್ ಅನ್ನು ನನ್ನ ಸಮಕ್ಷಮ ನಿಪಿ-1 ರಂತೆ ಸಂಜೆ 06.45 ರಿಂದ 07.35 ರ ಅವಧಿಯಲ್ಲಿ ಮಾಡಿದ್ದಾರೆ ಮತ್ತು ಅವರಿಗೆ ಕೃತ್ಯದ ಸ್ಥಳವನ್ನು ನಾನೇ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು